ಪ್ರಜ್ಞೆಯಿಂದಾಗಿ, ವಿಭಿನ್ನ ಸಂವೇದನೆಗಳಿಗೆ ಸಂಬಂಧಿಸಿದ ವಿವಿಧ ಗೊಂದಲಗಳು ದೂರವಾಗುತ್ತವೆ. ಒಂದು ನಿಶ್ಚಿತ ಅಭಿಪ್ರಾಯಕ್ಕೆ, ಒಂದು ದೃಢನಿರ್ಧಾರಕ್ಕೆ ಬರಲು ಅವನಿಗೆ ಸಾಧ್ಯವಾಗುತ್ತದೆ. ೧೯೩೬ ರಲ್ಲಿ ಪ್ರಕಟವಾದ 'ಭೌತವಿಜ್ಞಾನ ಮತ್ತು ಸತ್ಯತತ್ತ್ವ' (Physics and Reality) ಎಂಬ ತಮ್ಮ ಕೃತಿಯಲ್ಲಿಯೂ ಐನ್‌ಸ್ಟೈನ್ ಇದೇ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸಿದ್ದಾರೆ: "ನಮ್ಮ ಇಂದ್ರಿಯಾನುಭವಗಳು ಹೇಗಿರುತ್ತವೆಯೆಂದರೆ, ಆಧ್ಯಾತ್ಮಿಕ ಚಿಂತನದ ಮೂಲಕ ಮಾತ್ರ ಅವುಗಳನ್ನು ಸುವ್ಯವಸ್ಥಿತಗೊಳಿಸಲು ಸಾಧ್ಯ."

## ಐನ್‌ಸ್ಟೈನರ ಆಧ್ಯಾತ್ಮಿಕ ದೃಷ್ಟಿ

೧೯೨೯ ರಲ್ಲಿ ಐಕ್ಯಕ್ಷೇತ್ರ ಸಿದ್ಧಾಂತದ ಬಗೆಗಿನ ಐನ್‌ಸ್ಟೈನರ ಮುಖ್ಯ ಪ್ರಬಂಧವು ಪ್ರಕಟವಾದಾಗ, ಅಮೆರಿಕ ಮತ್ತು ಯೂರೋಪ್‌ಗಳಲ್ಲಿ ಅದರ ಸಾವಿರಾರು ಪ್ರತಿಗಳು ಮಾರಾಟವಾದವು. ಅನೇಕ ಪತ್ರಕರ್ತರು ಅವರ ಸಂದರ್ಶನ ಮಾಡಿದರು. ಬ್ರಿಟಿಷ್ ವರದಿಗಾರನೊಬ್ಬನಿಗೆ ನೀಡಿದ ಸಂದರ್ಶನದಲ್ಲಿ ಐನ್‌ಸ್ಟೈನ್ ಹೀಗೆ ಹೇಳಿದ್ದಾರೆ: "ನಿಸರ್ಗ ನಿಯಮಗಳಲ್ಲಿ ಕಂಡುಬರುವ ದ್ವಂದ್ವಗಳನ್ನು ಏಕೀಕೃತಗೊಳಿಸುವುದು ಹಾಗೂ ಅವುಗಳನ್ನು ವಿಶ್ಲೇಷಿಸಿ ಒಂದು ಸೂತ್ರರೂಪಕ್ಕೆ ತರುವುದು ನನ್ನ ಉದ್ದೇಶ. ಗುರುತ್ವಾಕರ್ಷಣ ಮತ್ತು ವಿದ್ಯುದಯಸ್ಕಾಂತೀಯ ಕ್ಷೇತ್ರಗಳನ್ನು ವಿಸ್ತರಿಸುವ ಮಹತ್ವಾಕಾಂಕ್ಷೆಯೂ ನನಗಿದೆ."

ಎಲೆಕ್ಟ್ರಾನ್‌ಗಳು ದೀರ್ಘವೃತ್ತಗಳಲ್ಲಿ ಪರಮಾಣುಗಳ ಕೇಂದ್ರಭಾಗದ ಸುತ್ತಮುತ್ತ ಚಲಿಸುವಂತೆ ಮಾಡುವ ಬಲವೂ, ಭೂಮಿಯನ್ನು ಸೂರ್ಯನ ಸುತ್ತ ತಿರುಗುವಂತೆ ಮಾಡುವ ಬಲವೂ ಒಂದೇ ಎನ್ನುತ್ತಾರೆ ಐನ್‌ಸ್ಟೈನ್. ಅವರ ಈ ಹೇಳಿಕೆಯು ವಿಶ್ವದ ಎಲ್ಲ ವಿದ್ಯಮಾನಗಳನ್ನೂ ಒಳಗೊಳ್ಳುವ, ಐಕ್ಯಕ್ಷೇತ್ರ ಸಿದ್ಧಾಂತದ ಅಂತಸ್ಸಾರವನ್ನು ಸಂಕ್ಷಿಪ್ತವಾಗಿ ತಿಳಿಸುತ್ತದೆ. ಕಣ್ಣಿಗೆ ಕಾಣುವ ವಿಶ್ವದ ಹಿಂದಿರುವ ಚಿರಂತನ ವಾಸ್ತವಿಕತೆಯತ್ತ ಅವರು ಹರಿಸಿದ ದೃಷ್ಟಿ ವೈಜ್ಞಾನಿಕವಷ್ಟೇ ಆಗಿರದೆ, ಆಧ್ಯಾತ್ಮಿಕವೂ ಆಗಿತ್ತು. ಭೌತವಿಜ್ಞಾನದಲ್ಲಿ ಕೆಲವು 'ಧಾರ್ಮಿಕ' ಅಂಶಗಳೂ ಇವೆ ಎಂಬ ತಮ್ಮ ಮಾತನ್ನು ಒಪ್ಪದ ಸೋಲೋವಿನ್ ಎಂಬುವವರಿಗೆ ಐನ್‌ಸ್ಟೈನ್ ಹೀಗೆ ಪತ್ರ ಬರೆಯುತ್ತಾರೆ: " 'ಧಾರ್ಮಿಕ' ಎಂಬ ಪದವನ್ನು ಬಳಸದೆ, ಬೇರಾವ ಪದವನ್ನು ಬಳಸುವುದೂ ಅಸಾಧ್ಯ. ಧಾರ್ಮಿಕ ಅಂಶಗಳನ್ನು ಕಳೆದುಕೊಂಡ ವಿಜ್ಞಾನವು ಬರಿಯ ಅಳಲೆಕಾಯಿ ವೈದ್ಯದಂತಾಗುತ್ತದೆ ಅಷ್ಟೆ!"

ವಿವೇಕ–ವಿವೇಚನೆಗಳಿಗೆ ಮೀರಿದ ಹಲವು ಆಶ್ಚರ್ಯಕರ ಅಂಶಗಳು ವಿಜ್ಞಾನದಲ್ಲಿಯೂ ಅವರಿಗೆ ಕಂಡುಬರುತ್ತಿದ್ದವು. "ನಮ್ಮ ಜ್ಞಾನವು ಹೆಚ್ಚು ಹೆಚ್ಚು ಅಭಿವೃದ್ಧಿಯಾಗುತ್ತ ಹೋದಂತೆ, ಇಂತಹ ಆಶ್ಚರ್ಯಕರ ಅಂಶಗಳೂ ಹೆಚ್ಚು ಹೆಚ್ಚಾಗಿ ಕಂಡುಬರುತ್ತವೆ" ಎಂದು ಒಮ್ಮೆ ಉದ್ಗರಿಸಿದ್ದರಂತೆ ಐನ್‌ಸ್ಟೈನ್. ತಮ್ಮ ಅಭಿಪ್ರಾಯವನ್ನು ವಿರೋಧಿಸುವಂಥ ಪ್ರತ್ಯಕ್ಷ ಪ್ರಮಾಣವಾದಿಗಳಿಗೂ (positivists) ನಾಸ್ತಿಕರಿಗೂ ಅವರು ಗೌರವ ತೋರಿಸುತ್ತಿರಲಿಲ್ಲ. ವಿಶ್ವವನ್ನು 'ಪರಮಾತ್ಮ–ಮುಕ್ತ'ವನ್ನಾಗಿ ಅಥವಾ 'ಆಶ್ಚರ್ಯಮುಕ್ತ'ವನ್ನಾಗಿ ಕೂಡ ಮಾಡಲು ಪ್ರಯತ್ನಿಸುವ ತತ್ತ್ವಶಾಸ್ತ್ರಜ್ಞರನ್ನೂ ಐನ್‌ಸ್ಟೈನ್ ನಿರ್ಲಕ್ಷಿಸುತ್ತಿದ್ದರು. ಧರ್ಮವನ್ನು ಕುರಿತ ಅವರ ಪರಿಕಲ್ಪನೆಯು ವಿಶ್ವದೃಷ್ಟಿಕೋನದಲ್ಲಿ ಬೇರೂರಿತ್ತು.

**"ಅನಂತದುದ್ದಕ್ಕೂ ಎಲ್ಲೆಡೆಯಲ್ಲಿಯೂ ಓತಪ್ರೋತವಾಗಿರುವ ಚೈತನ್ಯ ಜೀವನದ ರಹಸ್ಯವನ್ನು ಧ್ಯಾನಿಸುತ್ತಿರುವುದು, ನಾವು ಅಸ್ಪಷ್ಟವಾಗಿ ನೋಡುತ್ತಿರುವ ಈ ವಿಶ್ವದ ಅದ್ಭುತ ರಚನೆಯ ಬಗ್ಗೆ ಚಿಂತಿಸುವುದು ಹಾಗೂ ಪ್ರಕೃತಿಯಲ್ಲಿ ಪ್ರಕಟವಾಗಿರುವ ಚೈತನ್ಯಶಕ್ತಿಯ ಅಣುಭಾಗದಷ್ಟಾದರೂ ಅರಿತುಕೊಳ್ಳಲು ವಿನೀತನಾಗಿ ಪ್ರಯತ್ನಪಡುವುದು – ಇಷ್ಟನ್ನೇ ನಾನು ಮಾಡ ಬಯಸುವುದು."** **– ಆಲ್ಬರ್ಟ್ ಐನ್‌ಸ್ಟೈನ್**

೧೯೩೦ರ ಬೇಸಗೆಯಲ್ಲಿ ಐನ್‌ಸ್ಟೈನ್, ಬರ್ಲಿನ್‌ನ ನೈಋತ್ಯದಲ್ಲಿರುವ ಕಪುತ್ ಎಂಬ ಸ್ಥಳದಲ್ಲಿ ಏಕಾಂತವಾಗಿ ಕೆಲವು ದಿನಗಳನ್ನು ಕಳೆದರು. ಕೊಠಡಿಯಲ್ಲಿ ಏಕಾಕಿಯಾಗಿ ಕುಳಿತುಕೊಂಡೋ, ಹ್ಯಾವೆಲ್ ಸರೋವರದಲ್ಲಿ ದೋಣಿವಿಹಾರ ನಡೆಸುತ್ತಲೋ ಅವರು ನಡೆಸಿದ ಚಿಂತನೆಯ ಫಲವಾಗಿ 'ನಾನು ನಂಬುವುದು ಏನನ್ನು?' (What I Believe) ಎಂಬ ಮಹಾಕೃತಿ ಮೂಡಿಬಂತು. ತದನಂತರ ಇನ್ನೊಂದು ಕೃತಿ ಮೂಡಿಬಂತು. ಅದರ ಹೆಸರು, 'ನಾನು ಕಂಡಂತೆ ವಿಶ್ವ' (The world as I see It). ಇದರಲ್ಲಿ ಸಾಮಾಜಿಕ ಬದ್ಧತೆಯನ್ನು ಅರಿತಿದ್ದರೂ ತಾವು ಹೇಗೆ ಒಬ್ಬಂಟಿ ಪಯಣಿಗನಾಗಿ ಇದ್ದರೆಂಬುದನ್ನು ಅವರು ವಿವರಿಸಿದ್ದಾರೆ.

ಐನ್‌ಸ್ಟೈನರ ಮನಸ್ಸು ಏಕಾಂತದಲ್ಲಿ ಆಧ್ಯಾತ್ಮಿಕ ಶಿಖರಗಳಿಗೆ ಏರುತ್ತಿತ್ತು. ಅವರ ದೃಢ ಹಾಗೂ ಶಾಂತ ಅಂತರಂಗದ ಸ್ವಭಾವವನ್ನು ಪುಷ್ಟಿಗೊಳಿಸುವ ನಿತ್ಯನಿಧಿಗಾಗಿನ ಅನ್ವೇಷಣೆ ಅದಾಗಿತ್ತು. ಕೆಲವೊಂದು ಆದರ್ಶಗಳು ವಿಶ್ವಕೇಂದ್ರಿತ ಜೀವನವನ್ನು ನಡೆಸುವಂತೆ ಅವರನ್ನು ಪ್ರೇರೇಪಿಸಿದ್ದವು. ಅನುಭಾವಿಗಳ ಸ್ವತ್ತಾಗಿರುವ ಈ ಆದರ್ಶಗಳು ಗೌಣೀ ಪ್ರಕೃತಿಯನ್ನು ನಿಯಂತ್ರಿಸಿಕೊಂಡನಂತರ ಗಳಿಸಿಕೊಂಡ ಅಂತರಂಗದ ಆಧ್ಯಾತ್ಮಿಕ ವಿಕಸನವನ್ನು ಆಧರಿಸಿದ್ದವು.

ಐನ್‌ಸ್ಟೈನ್ ತಮ್ಮ ಜೀವನದುದ್ದಕ್ಕೂ ಸತ್ಯಪ್ರತಿಪಾದಕರಾಗಿಯೇ ಬಾಳಿದರು. ಅವರ ಗಭೀರ ಆಧ್ಯಾತ್ಮಿಕ ನಂಬಿಕೆಗಳು, ಹೆಸರು ಕೀರ್ತಿಗಳನ್ನು ತಿರಸ್ಕರಿಸಿದ ಅವರ ಪರಿಪೂರ್ಣ ನಿಸ್ವಾರ್ಥತೆ – ಇವೆಲ್ಲವೂ ಸರಳಜೀವನ ಮತ್ತು ಉನ್ನತ ಚಿಂತನೆಗಳಿಗಾಗಿ ತನ್ನನ್ನು ಮುಡುಪಾಗಿಸಿಕೊಂಡ ಹಿಂದೂ ಸಂನ್ಯಾಸಿಯೊಬ್ಬನ ಸ್ಮರಣೆಯನ್ನು ನಮಗೆ ಮಾಡಿಕೊಡುತ್ತವೆ. ಲೌಕಿಕ ಜೀವನದಲ್ಲಿದ್ದರೂ, ಅವರ ಸುತ್ತಲೂ ಪವಿತ್ರತೆಯ ಪ್ರಭಾವಳಿಯೊಂದು ಬೆಳಗುತ್ತಿದ್ದಂತೆ ಅನೇಕರಿಗೆ ಕಂಡುಬರುತ್ತಿತ್ತು. ಸಿ.ಪಿ. ಸ್ನೋ ಎಂಬ ಲೇಖಕರು ಐನ್‌ಸ್ಟೈನ್ ಬಗ್ಗೆ ಹೀಗೆ ಬರೆಯುತ್ತಾರೆ: **"ನನಗೆ ತೋಚುವಂತೆ, ಇವರು ಈ ಶತಮಾನದ ಅತ್ಯಂತ ಶ್ರೇಷ್ಠ ಬುದ್ಧಿವಂತರೆಂದೂ ಹಾಗೆಯೇ ಖಂಡಿತವಾಗಿಯೂ ನೈತಿಕ ಅನುಭೂತಿಯ ಮಹಾನ್ ಅಭಿವ್ಯಕ್ತಿಯೆಂದೂ ಕಂಡುಬರುತ್ತಾರೆ. ಮಾನವಜನಾಂಗಕ್ಕೆ ಸೇರಿದ ಇತರರಿಗಿಂತ ಅನೇಕ ವಿಧದಲ್ಲಿ ಅವರು ಹೀಗೆ ವಿಶಿಷ್ಟವಾಗಿಯೇ ಉಳಿಯುತ್ತಾರೆ."** ★

# ಪರಿಪೂರ್ಣ ಭಕ್ತರಾಗಿ ಸ್ವಾಮಿ ವಿವೇಕಾನಂದರು – ೩

ಸ್ವಾಮಿ ಭಜನಾನಂದ

(ಹಿಂದಿನ ಸಂಚಿಕೆಯಿಂದ)

## ಭಕ್ತಿಸಾಧನಗಳು

**ಭ**ಕ್ತಿತತ್ತ್ವದಲ್ಲಿನ ಎರಡನೆಯ ಭಾಗವೆಂದರೆ **ಹಿತ** ಅಥವಾ ಧ್ಯೇಯವನ್ನು ತಲುಪುವ ಸಾಧನಗಳು. ಈ ಬಗ್ಗೆ ಸ್ವಾಮಿ ವಿವೇಕಾನಂದರ ಭಾವನೆಗಳನ್ನು ಹೀಗೆ ಸಂಗ್ರಹಿಸಬಹುದು :

**೧. ಮೊದಲ ಘಟ್ಟ:** ಭಕ್ತಿಪಥದ ಮೊದಲ ಘಟ್ಟವೆಂದರೆ, ಯಾವುದನ್ನು ಶ್ರೀರಾಮಕೃಷ್ಣರು 'ವ್ಯಾಕುಲತೆ' ಎಂದು ಕರೆದರೋ, ಭಗವಂತನಿಗಾಗಿ ಅಂತಹ ತೀವ್ರತರನಾದ ಹಂಬಲ. ಸ್ವಾಮೀಜಿ ಹೀಗೆ ಹೇಳುತ್ತಾರೆ: "ನಮಗೆ ಬೇಕಾಗಿರುವುದು ಏನು? ಇದು ಮೊದಲನೆಯ ಮೆಟ್ಟಿಲು. ಪ್ರತಿದಿನವೂ ನಾವು ಈ ಪ್ರಶ್ನೆಯನ್ನು ಹಾಕಿಕೊಳ್ಳೋಣ. ನಮಗೆ ದೇವರು ಬೇಕಾಗಿದ್ದಾನೆಯೇ? ಪ್ರೀತಿಪಾತ್ರಳಾದ ಹೆಂಡತಿಯು ದೂರದೇಶಕ್ಕೆ ಹೋದ ತನ್ನ ಗಂಡನನ್ನು ಕುರಿತು ಚಿಂತಿಸುವಂತೆ, ಅಷ್ಟೇ ಪ್ರೇಮದಿಂದ ನಾವು ದೇವರನ್ನು ಬಯಸಬೇಕು. ಆಗ ನಮಗೆ ದೇವರು ಸಿಕ್ಕುವನು. ಗ್ರಂಥಶಾಸ್ತ್ರಗಳೆಲ್ಲ ನಮಗೆ ಏನನ್ನೂ ತಿಳಿಸಲಾರವು" (*ಭಕ್ತಿಯೋಗ, ಪು. ೨೧*).

**೨. ಪ್ರಾಥಮಿಕ ಸಾಧನೆಗಳು:** ಇವುಗಳಲ್ಲಿ ಸ್ವಾಮೀಜಿ ಶ್ರೀರಾಮಾನುಜರ ವಿಧಾನವನ್ನೇ ಅನುಕರಿಸುತ್ತಾರೆ. ಅವರು ವಿಧಿಸುವ ಏಳು ಗುಣಗಳಲ್ಲಿ ಐದನ್ನು ಸ್ವಾಮೀಜಿ ಬೋಧಿಸುತ್ತಾರೆ. ಅವುಗಳೆಂದರೆ, **ವಿವೇಕ, ವಿಮೋಕ** (ಆಸೆಗಳಿಂದ ಬಿಡುಗಡೆ), **ಕಲ್ಯಾಣ** (ಪಾವಿತ್ರ್ಯ–ಬಾಹ್ಯ ಮತ್ತು ಆಂತರಿಕ), **ಅನವಸಾದ** (ಮಂದಹಾಸದಿಂದ ಕೂಡಿರುವುದು) ಹಾಗೂ **ಅನುದ್ಧರ್ಷ** (ಮಿತಿಮೀರಿದ ಸಂತೋಷವನ್ನು ತಡೆಹಿಡಿಯುವುದು). ಅದಲ್ಲದೆ ಸ್ವಾಮೀಜಿ ಅರ್ಹನಾದ ಗುರುವಿನ ಮಾರ್ಗದರ್ಶನಕ್ಕೂ ಮಹತ್ವವನ್ನು ನೀಡುತ್ತಾರೆ, ಅಂತಹ ಗುರುವಿನ ಲಕ್ಷಣಗಳನ್ನು ವಿವರವಾಗಿ ಚರ್ಚಿಸುತ್ತಾರೆ.

೩. ಗೌಣೀಭಕ್ತಿಯ ಹಂತದಲ್ಲಿ ಇರುವ ಭಕ್ತರು ಕೈಗೊಳ್ಳಬೇಕಾದ ಪ್ರಾಯೋಗಿಕ ಆಧ್ಯಾತ್ಮಿಕ ಸಾಧನೆ ಅಥವಾ ಆಧ್ಯಾತ್ಮಿಕ ಸಾಧನಾವಿಧಾನಗಳ ಬಗ್ಗೆ ಇನ್ನು ಮುಂದೆ ಸ್ವಾಮೀಜಿ ತಿಳಿಹೇಳುತ್ತಾರೆ. ಇದೇ ಉಪಾಸನೆ ಅಥವಾ ಪೂಜಾವಿಧಾನ. ಇದರಲ್ಲಿ ಎರಡು ಬಗೆಗಳಿವೆ. ಒಂದು **ಪ್ರತೀಕೋಪಾಸನೆ**. ಎರಡನೆಯದು, **ನಾಮೋಪಾಸನೆ**. ಮೊದಲನೆಯದರಲ್ಲಿ ದೃಶ್ಯ ಚಿಹ್ನೆಗಳನ್ನು ಬಳಸಲಾಗುತ್ತದೆ ಮತ್ತು ಎರಡನೆಯದರಲ್ಲಿ ಶಬ್ದ ಚಿಹ್ನೆಗಳನ್ನು ಬಳಸಲಾಗುತ್ತದೆ. ಸಾಮಾನ್ಯವಾಗಿ ಈ ಎರಡೂ ವಿಧಾನಗಳನ್ನು ಒಟ್ಟಿಗೆ ಅನುಷ್ಠಾನ ಮಾಡಲಾಗುತ್ತದೆ.

ಪ್ರತೀಕಗಳ ಅರ್ಥ ಮತ್ತು ಮಹತ್ವವನ್ನು ಪ್ರತಿಪಾದಿಸಲು ಸ್ವಾಮೀಜಿ, ಬ್ರಹ್ಮಸೂತ್ರಗಳಿಗೆ ದಕ್ಷಿಣಭಾರತದ ಆಚಾರ್ಯರು ಬರೆದ ಭಾಷ್ಯಗಳ ಸಹಾಯವನ್ನು ಪಡೆದುಕೊಳ್ಳುತ್ತಾರೆ. ಹಿಂದುವೊಬ್ಬನು ಭಗವಂತನನ್ನು ವಿಗ್ರಹದಲ್ಲಿ ಪೂಜಿಸುವುದಿಲ್ಲ, ಅದಕ್ಕೆ ಬದಲಾಗಿ ವಿಗ್ರಹದ ಮೂಲಕ ಪೂಜಿಸುತ್ತಾನೆ ಎಂಬ ಅಂಶವನ್ನು ಅವರು ಎತ್ತಿ ತೋರಿಸುತ್ತಾರೆ. ಪ್ರತೀಕವು ಏಕಾಗ್ರತೆಗೆ ಸಹಾಯಕವಾದ ಸಾಧನವಷ್ಟೆ (**ದೃಷ್ಟಿ ಸೌಕರ್ಯಮ್**). ಅನಂತರ ಸ್ವಾಮೀಜಿ ಇಷ್ಟನಿಷ್ಠೆಯ ಪರಿಕಲ್ಪನೆಯ ವಿಷಯವನ್ನು ತೆಗೆದುಕೊಳ್ಳುತ್ತಾರೆ. ಇದು ಹಿಂದೂಧರ್ಮಕ್ಕೆ ವಿಶಿಷ್ಟವಾದ ಒಂದು ಕಲ್ಪನೆ. ಇದರ ಪ್ರಾಯೋಗಿಕ ಅಳವಡಿಕೆಯು ಸಾಮಾನ್ಯವಾಗಿ ಪ್ರತಿಯೊಬ್ಬ ವ್ಯಕ್ತಿಯ ಸ್ವಂತ ಆಂತರಂಗಿಕ ಜೀವನದ ಪವಿತ್ರ ರಕ್ಷಿತಭಾವನೆಯಾಗಿಯೇ ಸೀಮಿತವಾಗಿರುತ್ತಿತ್ತು. ಆದರೆ ಸ್ವಾಮಿ ವಿವೇಕಾನಂದರ ಚಿಂತನೆಗಳಲ್ಲಿ ಇಷ್ಟನಿಷ್ಠೆಯ ಪರಿಕಲ್ಪನೆಯು ವಿಶ್ವಸಾರ್ವತ್ರಿಕ ಮಹತ್ವವುಳ್ಳ ಪ್ರಮುಖ ಸಿದ್ಧಾಂತವಾಗಿ, ಧರ್ಮ ಸಾಮರಸ್ಯಕ್ಕೆ ಮುಕ್ತದ್ವಾರವಾಗಿ, ಅಂತರ–ಧಾರ್ಮಿಕ ಸಂವಾದ ಹಾಗೂ ತಿಳಿವಳಿಕೆಯ ಆಧಾರಸ್ತಂಭವಾಗಿ ರೂಪುಗೊಂಡಿದೆ. ಈ ಬಗ್ಗೆ ಸ್ವಾಮೀಜಿ ಹೀಗೆ ಹೇಳುತ್ತಾರೆ: "ಪ್ರತಿಯೊಂದು ಧಾರ್ಮಿಕ ಪಂಗಡವೂ ತನ್ನ ಒಂದು ಆದರ್ಶವನ್ನು ಮಾನವಕೋಟಿಗೆ ನೀಡುತ್ತದೆ. ಆದರೆ ಸನಾತನ ವೈದಿಕ ಧರ್ಮವಾದರೊ ಪರಂಜ್ಯೋತಿಯ ದೇವಾಲಯವನ್ನು ಪ್ರವೇಶಿಸುವುದಕ್ಕೆ ಹಲವು ದ್ವಾರಗಳನ್ನು ತೆರೆದು, ಮಾನವನ ಮುಂದೆ ಅನಂತಾದರ್ಶಗಳನ್ನು ಇಟ್ಟಿರುವುದು. ಅವುಗಳಲ್ಲಿ ಪ್ರತಿಯೊಂದರಲ್ಲಿಯೂ ಭಗವಂತನು ಪ್ರಕಾಶಿಸುತ್ತಿರುವನು" (*ಭಕ್ತಿಯೋಗ*, ಪು ೪೩, ೪೪).

ನಾಮೋಪಾಸನದ ಅಭ್ಯಾಸದಲ್ಲಿ ಉಪಯೋಗಿಸಲ್ಪಡುವ ಶಬ್ದಚಿಹ್ನೆಗಳ ಸಿದ್ಧಾಂತವನ್ನು ಸ್ವಾಮೀಜಿ ಅತ್ಯಂತ ವಿಶಿಷ್ಟವಾದ ರೀತಿಯಲ್ಲಿ ವಿವರಿಸಿದ್ದಾರೆ. ಸಾಂಪ್ರದಾಯಿಕ ಭಕ್ತಿಶಾಸ್ತ್ರಗ್ರಂಥಗಳಲ್ಲಿ ಈ ವಿಷಯವನ್ನು ಸಾಮಾನ್ಯವಾಗಿ ಸೇರಿಸಿರುವುದಿಲ್ಲ. ಆದರೂ ಇದಕ್ಕೆ ಸಂಬಂಧಪಟ್ಟ ಜಪಸಾಧನೆಗೆ ಎಲ್ಲ ಕಡೆ ಮಹತ್ವವನ್ನು ನೀಡಲಾಗುತ್ತದೆ. ಸ್ವಾಮೀಜಿ ತಮ್ಮ ಶಬ್ದಚಿಹ್ನೆಯ ವಿಶಿಷ್ಟ ಸಿದ್ಧಾಂತದಲ್ಲಿ ಹಿಂದೂ ವ್ಯಾಕರಣಕಾರರ ಸ್ಫೋಟದ ಪರಿಕಲ್ಪನೆಯನ್ನು ತಂತ್ರಶಾಸ್ತ್ರದ ನಾದಬ್ರಹ್ಮದ ಸಿದ್ಧಾಂತದ ಜೊತೆಗೆ ಮಿಳಿತಮಾಡಿದ್ದಾರೆ. ಬಹಳ ಅವಗಣನೆಗೆ ಒಳಗಾಗಿದ್ದ ಹಿಂದೂ ಶಬ್ದಚಿಹ್ನೆಯ ಸಿದ್ಧಾಂತಕ್ಕೆ ಜೀವ ತುಂಬಿ, ಅವರು ನಿಸ್ಪೃಹ ಆಧ್ಯಾತ್ಮಿಕ ಸಾಧಕರಿಗೆ ಮಹದುಪಕಾರವನ್ನು ಮಾಡಿದ್ದಾರೆ. ಓಂಕಾರದ ಆಧಾರಭೂತ ತತ್ತ್ವ ಮತ್ತು ಬೀಜಮಂತ್ರಗಳ ಬಗ್ಗೆ ಸ್ವಾಮೀಜಿಯವರ ಬೆಳಕುಚೆಲ್ಲುವ ಪ್ರತಿಪಾದನೆಯು ಈ ಲೇಖನದ ಪರಿಧಿಗೆ ಮೀರಿದುದು. ಅವರ ಈ ಚರ್ಚೆಯು ಕೇವಲ ಬೌದ್ಧಿಕ ತೇಜಸ್ಸಿನಿಂದ ಮೂಡಿಬಂದದ್ದಲ್ಲ, ಅದಕ್ಕೆ ಬದಲಾಗಿ, ಮೊದ

ಮೊದಲು ಭಾರತದಲ್ಲಿ ಅವರು ಕೈಗೊಂಡ ಪರಿಭ್ರಮಣದ ಸಮಯದಲ್ಲಿ ಆಲ್ಮೋರಾದ ಆಲದಮರದ ಕೆಳಗೆ ಅವರಿಗುಂಟಾದ ನೈಜ ಅನುಭೂತಿಯ ಆಧಾರದಿಂದ ಹೊಮ್ಮಿಬಂದದ್ದು ಎಂಬ ಸಂಗತಿಯನ್ನು ಮಾತ್ರ ನಾವು ಮರೆಯದೆ ಅರಿತುಕೊಳ್ಳಬೇಕು.

ಪ್ರಾರ್ಥನೆ ಅದರಲ್ಲೂ ಯಾಚನಾ ಪ್ರಾರ್ಥನೆಯ ಬಗ್ಗೆ ಸ್ವಾಮೀಜಿಯವರ ಅಭಿಪ್ರಾಯಗಳೇನು? ಪ್ರಾರ್ಥನೆಗಳನ್ನು ದೇವತಾರೂಪಗಳು ಮತ್ತು ಅವತಾರಪುರುಷರಿಗೆ ಮಾತ್ರ ಸಲ್ಲಿಸಬಹುದು ಎಂಬ ಅವರ ಇಂಗಿತವನ್ನು ನಾವು ಈಗಾಗಲೇ ತಿಳಿದುಕೊಂಡಿದ್ದೇವೆ. ಅವರು ಹೇಳುತ್ತಾರೆ, "ಭಗವಂತನನ್ನು ಆರಾಧಿಸಲಾಗದು. ಅವನು ವಿಶ್ವದಲ್ಲೆಲ್ಲಾ ವ್ಯಾಪಿಸಿರುವ ತತ್ತ್ವವಾಗಿರುವನು. ಮಾನವನಲ್ಲಿ ಅವನ ಅಭಿವ್ಯಕ್ತಿಯನ್ನಷ್ಟೇ ನಾವು ಪ್ರಾರ್ಥಿಸಲು ಸಾಧ್ಯವಾಗುವುದು." ಈ ಬಗೆಯ ಪ್ರಾರ್ಥನೆಗಳ ಆವಶ್ಯಕತೆಯಲ್ಲಿ ಅವರಿಗೆ ಬಲವಾದ ನಂಬಿಕೆಯಿತ್ತು. ಅವತಾರಪುರುಷನೊಬ್ಬನ ಜೀವಿತಕಾಲದಲ್ಲಿ ಆತನ ಸಂಪರ್ಕಕ್ಕೆ ಎಂದೂ ಬಾರದವನಿಗೆ ಇರುವ ಮಾರ್ಗವೇನು ಎಂದು ಒಬ್ಬರು ಪ್ರಶ್ನಿಸಿದರು. ಅದಕ್ಕೆ ಸ್ವಾಮೀಜಿ ಹೀಗೆ ಉತ್ತರಿಸಿದರು: "ಭಗವಂತನನ್ನು ಕೂಗಿಕರೆಯುವುದೇ ಅವನಿಗೆ ಇರುವ ಮಾರ್ಗ. ಆತನನ್ನು ಪ್ರಾರ್ಥಿಸುವವರು ಆತನ ದರ್ಶನಭಾಗ್ಯವನ್ನು ಹೊಂದುವರು. ನಮ್ಮ ಹಾಗಿರುವ ಮಾನವರೂಪದಲ್ಲಿಯೇ ಆತನನ್ನು ಅವರು ನೋಡಬಹುದು ಹಾಗೂ ಆತನ ಕೃಪೆಯನ್ನು ಹೊಂದಬಹುದು." ಈ ಬಗೆಯ ಪ್ರಾರ್ಥನಾವಿಧಾನಗಳು, ಪ್ರಾಮಾಣಿಕವೂ ಸಕಾರಾತ್ಮಕವೂ ಆಗಿದ್ದಲ್ಲಿ, ಖಂಡಿತವಾಗಿಯೂ ಅವುಗಳಿಗೆ ಭಗವಂತನಿಂದ ಉತ್ತರವು ದೊರೆಯುವುದು ಎಂದು ಅವರು ತಮ್ಮ ಸ್ವಂತ ಅನುಭವದಿಂದ ಅರಿತಿದ್ದರು. ಆದರೆ, ಕೆಲವು ಧರ್ಮಗಳು ಮತ್ತು ಧಾರ್ಮಿಕ ಪಂಗಡಗಳು ಬೋಧಿಸುವ ಅನಂತವೂ ನಿರ್ಗುಣವೂ ಸರ್ವವ್ಯಾಪಕವೂ ಆದ ಚೈತನ್ಯಸ್ವರೂಪವನ್ನು ಕುರಿತು ಕೈಗೊಳ್ಳುವ ಪ್ರಾರ್ಥನೆಗಳ ಗತಿಯೇನು? ಇದಕ್ಕೆ ಸ್ವಾಮೀಜಿ ಹೀಗೆ ಉತ್ತರಿಸುತ್ತಾರೆ: "ಪ್ರಾರ್ಥನೆಯಿಂದ ಒಬ್ಬ ವ್ಯಕ್ತಿಯ ಸೂಕ್ಷ್ಮಶಕ್ತಿಗಳು ಸುಲಭವಾಗಿ ಉದ್ದೀಪನಗೊಳ್ಳುವುವು. ಅದನ್ನು ಪ್ರಜ್ಞಾಪೂರ್ವಕವಾಗಿ ಮಾಡಿದಾಗ, ಎಲ್ಲ ಬಯಕೆಗಳೂ ಅದರಿಂದ ಈಡೇರುವುವು. ಆದರೆ ಅರಿವಿಲ್ಲದೆ ಮಾಡಿದಾಗಲೂ ಹತ್ತರಲ್ಲಿ ಒಂದು ಈಡೇರಬಲ್ಲುದು." ಈ ಬಗೆಯ ಪ್ರಾರ್ಥನೆಗಳಿಗೆ ಅಂತರಾಳದಿಂದಲೇ 'ಉತ್ತರ'ವು ದೊರಕುತ್ತದೆ; ಆತ್ಮವೇ ಪ್ರತಿಫಲನದ ಸಾಧನವಾಗಿ, ಅದರಿಂದ ಪ್ರತಿಫಲಿತವಾದ ಬಯಕೆಗಳು ನಾವು ಆಶಿಸುವ ಸಾರ್ಥಕತೆಯನ್ನು ತಂದುಕೊಡುತ್ತವೆ.

## ಪರಾಭಕ್ತಿ

ನಾವು ಇದುವರೆಗೆ ಗೌಣೀಭಕ್ತಿ ಅಥವಾ ವೈಧೀಭಕ್ತಿಯ ಸಾಧನೆಗಳನ್ನು ಕುರಿತು ಮಾತ್ರವೇ ಯೋಚಿಸುತ್ತಿದ್ದೆವು. ಈಗ ನಾವು ಪರಾಭಕ್ತಿಯನ್ನು ಕುರಿತು ಸ್ವಾಮಿ ವಿವೇಕಾನಂದರ ಅಭಿಪ್ರಾಯಗಳನ್ನು ತಿಳಿದುಕೊಳ್ಳೋಣ:

೧. ಸ್ವಾಮೀಜಿಯವರ ಪ್ರಕಾರ ಪರಾಭಕ್ತಿಯಲ್ಲಿ ಮೊದಲ ಮೆಟ್ಟಿಲೆಂದರೆ ಸಂಪೂರ್ಣ ತ್ಯಾಗ. ಅದು ಕಾಮಕಾಂಚನತ್ಯಾಗ ಮಾತ್ರವಲ್ಲ, ಆಚರಣೆಗಳು, ವಿಗ್ರಹಗಳು ಮತ್ತಿತರ ಪ್ರಾಥಮಿಕ ಅವಲಂಬನೆಗಳ ತ್ಯಾಗವೂ ಹೌದು. ಆದರೆ ಇದು ಸಹಜವಾಗಿರಬೇಕು, ಭಕ್ತನ ತೀವ್ರವಾಗುತ್ತಿರುವ ಭಗವದ್ಭಕ್ತಿಯ ನೈಸರ್ಗಿಕ ಫಲಸ್ವರೂಪವಾಗಿರಬೇಕು. ಸ್ವಾಮೀಜಿ ಇದಕ್ಕೊಂದು ಉದಾಹರಣೆಯನ್ನು ನೀಡುತ್ತಾರೆ. ಹಡಗೊಂದು ಅಯಸ್ಕಾಂತದ ಪರ್ವತದ ಬಳಿಸಾರಿತು. ಆಗ ಅದರಲ್ಲಿದ್ದ ಕಬ್ಬಿಣದ ಮೊಳೆಗಳು, ಸಲಾಕೆಗಳು ಎಲ್ಲವೂ ಕಿತ್ತುಕೊಂಡು ಬಂದು, ಮರದ ಹಲಗೆಗಳು ನೀರಿನಲ್ಲಿ ಸ್ವತಂತ್ರವಾಗಿ ತೇಲಾಡಿದವು. ಇದೇ ರೀತಿ ದಿವ್ಯಪ್ರೇಮದ ಬಲವು ಜೀವಿಯನ್ನು ಬಂಧಿಸಿರುವ ಸಂಕೋಲೆಗಳನ್ನೆಲ್ಲವನ್ನೂ ನಿವಾರಿಸಿಬಿಡುತ್ತದೆ, ಅವನನ್ನು ಮುಕ್ತನನ್ನಾಗಿ ಮಾಡುತ್ತದೆ.

> **"ಪರಾಭಕ್ತಿಯ ನಿರುಪಾಧಿಕ ಪ್ರೇಮವನ್ನು ಮಾನವ ಭಾಷೆಯಲ್ಲಿ ವ್ಯಕ್ತಪಡಿಸುವುದು ಅಸಾಧ್ಯ. ಪ್ರೇಮದ ಪರಮ ಸೌಂದರ್ಯ ಮತ್ತು ಪರಿಪೂರ್ಣತೆಯನ್ನು ಮಾನವ ತನ್ನ ಕಲ್ಪನೆಯ ಚರಮಸೀಮೆಯನ್ನು ಮುಟ್ಟಿದರೂ ತಿಳಿದುಕೊಳ್ಳಲು ಅಸಾಧ್ಯ. ಆದರೂ ಭಕ್ತಿಮಾರ್ಗದ ಅನುಯಾಯಿಗಳು ಎಲ್ಲ ಕಾಲಗಳಲ್ಲಿಯೂ ಗೌಣೀ ಮತ್ತು ಪರಾಸ್ಥಿತಿಯಲ್ಲಿರುವ ಭಕ್ತಿಯನ್ನು ತಿಳಿದುಕೊಳ್ಳುವುದಕ್ಕೆ ಮತ್ತು ಅದನ್ನು ಇತರರಿಗೆ ವಿವರಿಸುವುದಕ್ಕೆ ಅಸಮರ್ಪಕವಾದ ಮಾನವ ಭಾಷೆಯನ್ನೇ ಉಪಯೋಗಿಸಬೇಕಾಯಿತು."**
>
> – ಸ್ವಾಮಿ ವಿವೇಕಾನಂದ (*ಕೃತಿಶ್ರೇಣಿ*, ೧:೨೪೩)

೨. ಪರಾಭಕ್ತಿಯಲ್ಲಿನ ಮುಂದಿನ ಅಂಶವೆಂದರೆ ಭಗವಂತನ ಕುರಿತಾಗಿ ಒಂದು ನಿಶ್ಚಿತವಾದ ಮನೋಭಾವವನ್ನು ಅಥವಾ ಸಂಬಂಧವನ್ನು ಬೆಳೆಸಿಕೊಳ್ಳುವುದು. ತಮ್ಮ ಭಕ್ತಿಯೋಗ ಪ್ರವಚನಗಳಲ್ಲಿ ಸ್ವಾಮೀಜಿ ಭಕ್ತಿಶಾಸ್ತ್ರಗಳಲ್ಲಿ ವಿಧಿಸಿರುವ ಅಂತಹ ಐದು ಭಾವಗಳನ್ನು ಚರ್ಚಿಸುತ್ತಾರೆ. ಅವೆಂದರೆ, **ಶಾಂತ, ದಾಸ್ಯ, ಸಖ್ಯ, ವಾತ್ಸಲ್ಯ** ಮತ್ತು **ಮಾಧುರ್ಯ**. ಈ ಭಾವಗಳು ಮುಖ್ಯವಾಗಿ ಪರಾಭಕ್ತಿಯ ಆವರಣಕ್ಕೆ ಸೇರಿದ ಆಧ್ಯಾತ್ಮಿಕ ಸ್ಥಿತಿಗಳು ಎಂಬುದನ್ನು ನಾವು ಯಾವಾಗಲೂ ನೆನಪಿನಲ್ಲಿಡಬೇಕು. ನಿಜವಾಗಿ ಹೇಳುವುದಾದರೆ, ಭಗವಂತನು ಅವಾಙ್ಮನಸಗೋಚರನು.

ಮಾನವ ಭಾವನೆಗಳನ್ನೇ ದಿವ್ಯಪ್ರೇಮವೆಂದು ತಪ್ಪಾಗಿ ಭಾವಿಸಿ, ಅನೇಕ ಆಧ್ಯಾತ್ಮಿಕ ಪಿಪಾಸುಗಳು ತಮಗೂ ಮತ್ತು ತಮ್ಮೊಡನೆ ಸಂಬಂಧಹೊಂದಿರುವ ಇತರರಿಗೂ ಬಹಳಷ್ಟು ಸಮಸ್ಯೆಗಳನ್ನು ಒಡ್ಡುತ್ತಾರೆ. ಇನ್ನೊಂದು ಪ್ರಮುಖವಾದ ಅಂಶವೆಂದರೆ ಭಾವವು ಉನ್ನತವಾದಷ್ಟೂ ಅದಕ್ಕಾಗಿನ ಸ್ವಪ್ರಯತ್ನವೂ ತೀವ್ರವಾಗಿರಬೇಕಾಗುತ್ತದೆ. ಅನೇಕ ಸಂದರ್ಭಗಳಲ್ಲಿ **ಮಧುರ** ಎಂಬ ಅತ್ಯುನ್ನತ ಆಧ್ಯಾತ್ಮಿಕ ಭಾವವು ಬಹುತೇಕ ಆಧ್ಯಾತ್ಮಿಕ ಸಾಧಕರಿಗೆ ತಕ್ಕದ್ದಲ್ಲ ಎಂದು ಸ್ವಾಮೀಜಿ ಸ್ಪಷ್ಟಪಡಿಸಿದ್ದಾರೆ.

## ಭಕ್ತಿತತ್ತ್ವದ ಮೌಲ್ಯಗಳು

ಭಕ್ತಿತತ್ತ್ವದಲ್ಲಿನ ಮೂರನೆಯ ವಿಭಾಗವೆಂದರೆ, ಪುರುಷಾರ್ಥ ಅಥವಾ ಭಕ್ತಿಸಾಧನೆಯಿಂದ ಸಂಗ್ರಹಿತವಾಗಿ ಉತ್ಪನ್ನವಾಗುವ ಮೌಲ್ಯಗಳು. ಈ ಮಹತ್ತ್ವದ ವಿಷಯದ ಬಗ್ಗೆ ಸ್ವಾಮಿ ವಿವೇಕಾನಂದರ ಚಿಂತನೆಗಳನ್ನು ನಾವು ಮೂರು ಶೀರ್ಷಿಕೆಗಳಲ್ಲಿ ನೋಡಬಹುದು: **ಪ್ರಜ್ಞೆಯ ಪರಿವರ್ತನೆ, ಮೌಲ್ಯಗಳ ಮರುಮೌಲ್ಯಮಾಪನ** ಮತ್ತು